


ತುರುವೀಹಾಳ ಚಂದ್ರು

ಕಲೆ: ವಿಶ್ವನಾಥ ಎ.ಎಸ್.




# ಶೂನ್ಯವೆಂಬ ಕನ್ನಡಿ

ಮುಗಿಲೊಳಗೆ ನೆಲ ಮುಖ ನೋಡಿಕೊಳ್ಳುವುದು,
ಮುಗಿಲು ನೆಲದೊಳಗೆ

ಹೆಣ್ಣಿನ ಮುಂದೆ ಗಂಡೆಂಬ ಮಾಗದ ಕನ್ನಡಿ
ಗಂಡಿನ ಮುಂದೆ ಹೆಣ್ಣೆಂಬ ತೂಗುವ ಕನ್ನಡಿ
ಒಡೆದು ಚೂರಾಗಿ ನೂರು ಮುಖ
ಹುಡುಕುವನು ಮನುಷ್ಯ ಮತ್ತಲ್ಲೇ
ತನ್ನ ಸುಖ

ಶೂನ್ಯ
ಸಂತನ ಕನ್ನಡಿ;
ಹಸಿವಾದರೆ ಅನ್ನ, ದಾಹವಾದರೆ ನೀರು
ಮತ್ತೇ ಬೇಕೆನಿಸಲು ಅವನು
ಕನ್ನಡಿಯ ಮುಂದೆ ಒಮ್ಮೆ ನಿಂತು
ಆತ್ಮದ ಕಲೆಗಳನ್ನು ಒರೆಸಿಕೊಳ್ಳುವನು

ತನ್ನ ತಾ ಕ್ಷಮಿಸುತ್ತ ಹಾದಿ ಸವೆಸುವನು.